**ಸೇತುವೆ ಕಾಮಗಾರಿಗಳನ್ನು ಅನುಷ್ಠಾನ**

**1005 (392) ಶ್ರೀ ಕುಮರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) :** ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯ ಅನುಷ್ಠಾನಕ್ಕೆ ಅನುಸರಿಸಲಾಗುತ್ತಿರುವ ಮಾನದಂಡಗಳೇನು?

ಆ) ಸೇತುವೆ ಕಾಮಗಾರಿಗಳಿಗಾಗಿ ಮೀಸಲಿಡಲಾಗಿರುವ ಅನುದಾನ ಎಷ್ಟು?

ಇ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ಮಂಜೂರಾತಿ ನೀಡಿರುವ ವಿವಿಧ ಕಾಮಗಾರಿಗಳ ಪೂರ್ಣ ವಿವರ ಒದಗಿಸುವುದು?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :**

ಅ) ನಬಾರ್ಡ್ ಸಾಲ ಸಹಾಯದ ಆರ್.ಐ.ಡಿ.ಎಫ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಲು ಕಾಮಗಾರಿಗಳನ್ನು ಕೈಗೊಳ್ಳಬೇಕಿದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯಡಿ ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ನಬಾರ್ಡ್‌ನ ಯೋಜನೆಯಡಿ ಲೋಕೋಪಯೋಗಿ ಇಲಾಖೆಗೆ ಸೇತುವೆಗಳಿಗೆ ಪ್ರತ್ಯೇಕವಾಗಿ ಅನುದಾನ ನಿಗದಿಪಡಿಸಿರುವುದಿಲ್ಲ.

ಇ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರವು ಮೇ–2008 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ತದನಂತರ ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಆರ್‌ಐಡಿಎಫ್ ಯೋಜನೆಯಡಿ 4 ರಸ್ತೆ ಮತ್ತು 1 ಸೇತುವೆ ಕಾಮಗಾರಿಗಳು 311.00 ಲಕ್ಷ ರೂ ಮೊತ್ತದಲ್ಲಿ ಮಂಜೂರಾಗಿದ್ದು, ಕಾಮಗಾರಿಗಳ ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ಆರ್‌ಐಡಿಎಫ್ ಯೋಜನೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ |
|---|---|---|---|
| 1 | 14 | ಶಿವಮೊಗ್ಗ–ಹೊಸಕೋಟೆ ರಸ್ತೆಯ ಬುಳ್ಳಾಪುರದಿಂದ ಹರಿಜನ ಕಾಲೋನಿ ಮಾರ್ಗ ಕ್ಯಾತನಕೊಪ್ಪ ಸೇರುವ ರಸ್ತೆ (ಹಂತ–1) | 100.00 |
| 2 | 14 | ಕಾಚಿನಕಟ್ಟೆ–ಯರಗನಾಳು ಗ್ರಾಮಗಳ ನಡುವೆ ಹಳ್ಳಕ್ಕೆ ಸೇತುವೆ ನಿರ್ಮಾಣ | 45.00 |
| 3 | 14 | ಕೂಡಿಗೆರೆ–ಕಮ್ಮರಘಟ್ಟ ರಸ್ತೆಯಿಂದ ರಾಷ್ಟ್ರೀಯ ಹೆದ್ದರಿ–13ನ್ನು ತಟ್ಟೆಹಳ್ಳಿ, ಡಿಬಿ ಹಳ್ಳಿ ಮಾರ್ಗ ಸೇರುವ ರಸ್ತೆ ಅಭಿವೃದ್ಧಿ (ಹಂತ–1) | 44.00 |
| 4 | 15 | ಆಯನೂರು–,ಆಲೂರು ರಸ್ತೆಯಿಂದ ಮಲ್ಲೇಶಂಕರ ದೇವಸ್ಥಾನಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ | 65.00 |
| 5 | 15 | ಕಲ್ಲಜ್ಜನಹಳ್ಳಿ–ಹನುಮಂತಾಪುರ ರಸ್ತೆ ಅಭಿವೃದ್ಧಿ | 57.00 |

**ಬಂದರು ಅಭಿವೃದ್ಧಿ ಪಡಿಸುವುದು**

**1010 (624) ಶ್ರೀ ಲಾಲಾಜಿ. ಆರ್. ಮೆಂಡನ್ (ಕಾಪು) :** ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ವಿಧಾನಸಭೆ ಕ್ಷೇತ್ರದ ಹೆಜಮಾಡಿ ಮೀನುಗಾರಿಕೆ ಬಂದರು ಅಭಿವೃದ್ಧಿಯ ಬಗೆಗಿನ ಪ್ರಸ್ತಾವನೆಯು ಸರ್ಕಾರದಲ್ಲಿ ಯಾವ ಹಂತದಲ್ಲಿದೆ;

ಆ) ಈ ಮೊದಲು ಹೆಜಮಾಡಿಗೆ ಹೂಳೆತ್ತುವ ಸಲುವಾಗಿ ಮಂಜೂರಾಗಿರುವ ಹಾಗೂ ಬಿಡುಗಡೆಯಾಗಿರುವ 2 ಕೋಟಿ ರೂಪಾಯಿಗಳ